
# ಬದುಕಿನಲ್ಲಿ ಅಲ್ಪತೃಪ್ತಿ, ಕಾವ್ಯದಲ್ಲಿ ಮಹತ್ವಾಕಾಂಕ್ಷೆ

ಸಂದರ್ಶನ: **ರಘುನಾಥ ಚ.ಹ.**

ಚಿತ್ರಗಳು: ರಂಜು ಪಿ.



ಕಳೆದ ನಾಲ್ಕು ದಶಕಗಳಿಂದ ತಮ್ಮ ಬರವಣಿಗೆಯ ಮೂಲಕ, ಮುಖ್ಯವಾಗಿ ಕಾವ್ಯದ ಮೂಲಕ ಸಹೃದಯರೊಂದಿಗೆ ಹೃದಯಸಂವಾದ ನಡೆಸುತ್ತಿರುವ ಕನ್ನಡದ ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೀಗ, ಕಲಬುರ್ಗಿಯಲ್ಲಿ ಫೆ. 5ರಿಂದ ನಡೆಯುವ 85ನೇ ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ’ದ ಅಧ್ಯಕ್ಷತೆಯ ಗೌರವ. ಕನ್ನಡನುಡಿಯ ಬಹುದೊಡ್ಡ ಸಂಭ್ರಮವಾದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಸಂಭ್ರಮದಲ್ಲಿರುವ ಎಚ್ಚೆಸ್ವಿ ‘ಮಯೂರ’ಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ.